<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ</u>

<u>ಸಿ.ಸಿ.ನಂ.274/2020</u>

| | | | |
|---|---|---|---|
| ಹೆಸರು | : | ಸದ್ರುಲ್ಲ ಶರೀಫ್ ಹೆಚ್ | ಸಿ .ಡಬ್ಲ್ಯೂ:27 |
| ತಂದೆ ಹೆಸರು | : | ಹುಮಾಯುನ್ ಷರೀಫ್ | ಪಿ .ಡಬ್ಲ್ಯೂ:6 |
| ವಯಸ್ಸು | : | 39 ವರ್ಷ | |
| ಉದ್ಯೋಗ | : | ಹಿರಿಯ ಮೋಟರ್ ವಾಹನ ನಿರೀಕ್ಷಕರು ಪ್ರಾದೇಶಿಕ ಸಾರಿಗೆ ಕಚೇರಿ , ತುಮಕೂರು | |
| ವಾಸಸ್ಥಳ | : | ತುಮಕೂರು | |

ಸಾಕ್ಷಿಯನ್ನು ದಿಃ 18-08-2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

<u>ಕಲಂ **299** ಸಿ ಆರ್ ಪಿ ಸಿ ರಡಿಯಲ್ಲಿ ಸಾಕ್ಷಿಯು ಮುಖ್ಯ ವಿಚಾರಣೆ **ಸಹಾಯಕ ಸರಕಾರಿ ಅಭಿಯೋಜಕರಿಂದಃ**</u>

ದಿಃ 05-07-2019 ರಿಂದ ಇಲ್ಲಿಯವರೆಗೂ ಹಿರಿಯ ಮೋಟರ್ ವಾಹನ ನಿರೀಕ್ಷರಾಗಿ ಪ್ರಾದೇಶಿಕ ಸಾರಿಗೆ ಕಚೇರಿ , ತುಮಕೂರು ಸೇವೆ ಸಲ್ಲಿಸುತ್ತಿದ್ದೇನೆ .

ದಿಃ 24-01-2020 ರಂದು ಗುಬ್ಬಿಯ ವೃತ್ತ ನಿರೀಕ್ಷಕರು ಕೋರಿಕೆಯ ಅರ್ಜಿಯೊಂದನ್ನು ಸಲ್ಲಿಸಿ ಈ ಅಪಘಾತದ ಪ್ರಕರಣಕ್ಕೆ ಸಂಬಂಧಿಸಿ ವಾಹನಗಳನ್ನು ಪರಿಶೀಲಿಸಿ ಐ ಎಂ ವಿ ವರದಿ ನೀಡುವಂತೆ ಕೋರಿದ್ದರು , ಆ ಪ್ರಕಾರ ಅದೇ ದಿನ ಸಂಜೆ 4.30 ಗಂಟೆಗೆ ದೊಡ್ಡಗುಣಿ ಪಾರ್ಕಿಂಗ್ ಏರಿಯಾ ದಲ್ಲಿ ಎನ್ ಹೆಚ್ 206 ರಸ್ತೆಯಲ್ಲಿ ಎರಡು ವಾಹನಗಳನ್ನು ಪರೀಕ್ಷೆಗೆ ಒಳಪಡಿಸಿದ್ದೇನೆ . ಸದರಿ ಅಪಘಾತವು ಮಾರುತಿ ಓಮಿನಿ ಮತ್ತು ಖಾಸಗಿ ಸ್ಲೀಪರ್ ಬಸ್ ನಡುವೆ ನಡೆದಿತ್ತು .

ಎರಡು ವಾಹನಗಳ ಮೇಲೆ ನೋಂದಣಿ ಫಲಕಗಳು ಇರದಿದ್ದ ಕಾರಣ ಎರಡು ವಾಹನಗಳ ಅಡಿಗಟ್ಟು ಸಂಖ್ಯೆಗಳನ್ನು ನಮೂದಿಸಿ ಬೆಂಕಿಗೆ ಆಹುತಿಯಾಗಿದ್ದ ವರದಿಯನ್ನು ದೃಢೀಕರಿಸಿ ಸಲ್ಲಿಸಿರುತ್ತೇನೆ .

ಎರಡು ವಾಹನಗಳ ಬ್ರೇಕ್ ಮತ್ತು ಬ್ರೇಕ್ ಸಿಸ್ಟಮ್ ನ್ನು ಪರೀಕ್ಷಿಸಲು ಸಾಧ್ಯವಾಗಿರಲಿಲ್ಲ . ನನ್ನ ಅಭಿಪ್ರಾಯದಲ್ಲಿ ಈ ಅಪಘಾತವು ಯಾವಾ ಕಾರಣದಿಂದ ನಡೆದಿದೆ ಎಂದು ತಿಳಿಸಲು ಸಾಧ್ಯವಾಗಿರುವುದಿಲ್ಲ .

ಸಾಕ್ಷಿಗೆ ವರದಿ ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -11 ಎಂದು ಸಾಕ್ಷಿ ಸಹಿಯನ್ನು ನಿಪಿ -11 (ಎ) ಎಂದು ಗುರುತಿಸಲಾಯಿತು.

<u>ಮರುವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
(ಅನುಪಮ.ಡಿ )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ